ದಿನಾಂಕ **03-09-2022** ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ-**4** ಮತ್ತು **5** ಪರ ಆರ್.ಜಿ. ವಕೀಲರವರಿಂದ

ಪ್ರತಿವಾದಿ-5 ಅವರಿಗೆ ಕಿಶನ ಅವರು ಮಾಡಿಕೊಟ್ಟ ಕ್ರಯಪತ್ರಕ್ಕೆ ನನ್ನ ಸಹಿ ಇರುತ್ತದೆ. ಸದರೀ ಸಹಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಸಹಿ ಒಂದೇ ಇರುತ್ತದೆ. ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡುತ್ತಿರುವ ವಿಚಾರ ನನಗೆ ಗೊತ್ತಿತ್ತು ಕೀಶನ ತಂದೆ ದಿಗಂಭರರಾವ ಅವರು ಸುಮಿತ್ರಾಬಾಯಿ ಗಂಡ ಮಾಡಧವರಾವ ಜಾಧವ ಅವರಿಗೆ ಜಮೀನು ಮಾರಾಟ ಮಾಡುವ ಸಂಬಂಧ ಕ್ರಯ ಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ಸಹಿ ಮಾಡಿದ ಕ್ರಯ ಪತ್ರದಲ್ಲಿ ನಮೂದು ಮಾಡಿದ ಸರ್ವೆ ನಂ. 36/3-2 ಆಗಿದ್ದು 28 ಗುಂಟೆ ಜಮೀನಿಗೆ ಸಂಬಂಧಿಸಿದ್ದು ಇರುತ್ತದೆಂದರೆ ಸರಿ. ಖರೀದಿ ಆದ ನಂತರ ಸುಮಿತ್ರಾಬಾಯಿ ಅವರಿಗೆ ಸ್ವಾಧೀನವನ್ನು ಬಿಟ್ಟುಕೊಡಲಾಗಿದ್ದು ಅವರ ಹೆಸರಿಗೆ ಖಾತೆ ಬದಲಾವಣೆ ಸಹ ಆಗಿದೆಯೆಂದರೆ ಸರಿ.

ನನಗೆ ಸೇರಿದ ಜಮೀನು ಗುತ್ತಿ ಗ್ರಾಮದಲ್ಲಿದ್ದು ಅದರ ಸರ್ವೆ ನಂ. 28 ಆಗಿದ್ದು ಅದರ ವಿಸ್ತೀರ್ಣ 2 ಎಕರೆ 6 ಗುಂಟೆಗೆ ಸ್ವಲ್ಪ ಕಡಿಮೆ ಇರುತ್ತದೆ. ಸರ್ವೆ ನಂ. 35 ಮತ್ತು 36 ಪಶ್ಚಿಮ ದಿಕ್ಕಿಗೆ ನಮ್ಮ ಸರ್ವೆ ನಂಬರ ಇರುತ್ತದೆ. ಸರ್ವೆ ನಂ. 35 ಮತ್ತು 36 ಮತ್ತು ನನ್ನ ಜಮೀನಿನ ನಡುವೆ 2 ಕೀ.ಮೀ. ಅಂತರವಿದೆಯೆಂದರೆ ಸಾಕ್ಷಿ 1 ಕೀ.ಮೀ. ಇದೆ ಎಂದು ಹೇಳುತ್ತಾರೆ.

ಗಣಪತಿ ಬಾಪು ಅವರು ಸರ್ವೆ ನಂ. 35/1 ರಲ್ಲಿ 2 ಎಕರೆ 35 ಗುಂಟೆ ಮತ್ತು ಮಾಣೀಕ ವೆಂಕೋಬಾ ಅವರು 35/2 ರಲ್ಲಿ 2 ಎಕರೆ 34 ಗುಂಟೆಗೆ ಮಾಲೀಕರು ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ್ದು ಈ ಬಗ್ಗೆ ಪಹಣಿ ಪತ್ರಿಕೆ ನೋಡಿರುವುದಿಲ್ಲ ಸರ್ವೆ ನಂ. 35/1 ಮತ್ತು 35/2 ಜಮಿನುಗಳ ಸರ್ವೆ ನನ್ನ ಸಮಕ್ಷಮ ಆಗಿರುತ್ತವೆ. ನಾನು ಮತ್ತು ಪ್ರತಿವಾದಿ-4 ಜಮೀನುಗಳ ಅಳತೆ ಮಾಡಿರುತ್ತೇವೆ.

ಪ್ರಶ್ನೆ:- ಯಾವ ಕಾರಣಕ್ಕೆ ಅಳತೆ ಮಾಡಿರುವಿರಿ?

ಉತ್ತರ:- ನಾನು ಏಕೆ ಮಾಡಲಿ ಅವರು ಕರೆದಿದ್ದಕ್ಕೆ ನಾನು ಮಾಡಿರುತ್ತೇನೆ.

ವಾದಿಗಳು ಸರ್ವೆ ನಂ. 35/1 ರಲ್ಲಿ 2 ಎಕರೆ 35 ಗುಂಟೆ ಮತ್ತು ಸರ್ವೆ ನಂ: 35/2 ರಲ್ಲಿ 2 ಎಕರೆ 34 ಗುಂಟೆ ಮಾಲೀಕರು ಇದ್ದಾರೆ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿದ್ದು ಯಾರು ಯಾರು ಎಷ್ಟು ಎಷ್ಟು ವಿಸ್ತೀರ್ಣಕ್ಕೆ ಮಾಲೀಕರು ಇದ್ದಾರೆಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಅವರು ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆಂದು ನನಗೆ ಹೇಳಲು ಬರುವುದಿಲ್ಲ. 2 ಜಮೀನುಗಳ ಚಕ್ಕುಬಂದಿ ನನಗೆ ಹೇಳಲು ಬರುತ್ತದೆ.

ಸರ್ವೆ ನಂ: 35/1 ರ ಚಕ್ಕುಬಂದಿ:- ಪೂರ್ವಕ್ಕೆ ಶ್ರೀಮಂತ ಅವರ ಜಮೀನು, ಪಶ್ಚಿಮಕ್ಕೆ ರಸ್ತೆ ಇದ್ದು ನಂತರ ವಿಠಲ ನಾಯಕ ಅವರ ಜಮೀನು, ಉತ್ತರಕ್ಕೆ ಬಾಪು ಅಥವಾ ಶಿಥಲ ಅವರ ಜಮೀನು ಮತ್ತು ದಕ್ಷಿಣಕ್ಕೆ ಕುಶಾಲಬಾಯಿ ವೆಂಕಟರಾವ ವಚಲಾ ಅವರ ಜಮೀನು ಇದೆ.

ಸರ್ವೆ ನಂ: 35/2 ರ ಚಕ್ಕುಬಂದಿ:- ಪೂರ್ವಕ್ಕೆ ಭೀಮಾಶಂಕರ ಮತ್ತು ಶ್ರೀಮಂತ ಅವರ ಜಮೀನು, ಪಶ್ಚಿಮಕ್ಕೆ ಗುಂಡು ಜಾಧವ ಅವರ ಜಮೀನು, ಉತ್ತರಕ್ಕೆ ಬಾಪು ಅವರ ಜಮೀನು ಮತ್ತು ದಕ್ಷಿಣಕ್ಕೆ ಮಾಧವ ದಿಗಂಬರ ಅವರ ಜಮೀನು ಇದೆ.

ಪ್ರತಿವಾದಿಗಳು ಸರ್ವೆ ನಂ. 36 ರಲ್ಲಿ 8 ಎಕರೆ 30 ಗುಂಟೆಗೆ ಮಾಲೀಕರು ಇರುತ್ತಾರೆ. ಅವರು ಮಾಲೀಕರು ಇದ್ದ ಬಗ್ಗೆ ಪಹಣಿ ಪತ್ರಿಕೆ ನೋಡಿರುವುದಿಲ್ಲ. ಸರ್ವೆ ನಂ. 36 ರ ಅಳತೆ ಕಾರ್ಯ ನನ್ನ ಸಮಕ್ಷಮ ಮಾಡಿರುವುದಿಲ್ಲ.

ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ4 ರಲ್ಲಿ ಕ್ರಯ ಪತ್ರದ ಬಗ್ಗೆ ನಮೂದು ಇದ್ದು ಅದು ಈ ಮೊದಲು ನಾನು ಸಾಕ್ಷಿಯಾಗಿ ಸಹಿ ಮಾಡಿದ ಮತ್ತು ನಾನು ನೋಡಿದ ದಾಖಲೆಯಾಗಿರುತ್ತದೆಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ4 ರಲ್ಲಿ ಸುಲಾನಾಮಾ ಬಗ್ಗೆ ಹೇಳಿದ್ದು ಯಾವ ದಿನಾಂಕ ಆಗಿರುತ್ತದೆಂದರೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ. ಸುಲಾನಾಮಾ ಪ್ರಭು ಧಶರತರಾವ ಬಿರಾದಾರ, ಶ್ರೀಮಂತ ಹಾಗೂ ನನ್ನ ಮತ್ತು ಇತರರ ಸಮಕ್ಷಮ ಆಗಿರುತ್ತದೆ.

ಸುಲಾನಾಮಾ ಅನ್ನು ತುಕಾರಾಮ ಎನ್ನುವವರು ಮರಾಠಿ ಭಾಷ್ಷೆಯಲ್ಲಿ ಬರೆದಿರುತ್ತಾರೆ. ಮೇಲೆ ಹೇಳಿದ ಎಲ್ಲರೂ ಅದಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ. ಅವರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುವುದಿಲ್ಲ.

ಪ್ರಶ್ನೆಃ- ಸುಲಾನಾಮಾ ದಲ್ಲಿ ಮಾಲೀಕತ್ವದ ಬಗ್ಗೆ ಬರೆದಿರುವುದಿಲ್ಲ?

ಉತ್ತರಃ- ನಕಾಶೆ ಪ್ರಕಾರ ಮಾಡಿಕೊಳ್ಳಬೇಕೆಂದು ಬರೆದಿರುತ್ತಾರೆ.

ಗುತ್ತಿ ಗ್ರಾಮದ ಸರ್ವೆ ನಂ. 36 ರಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿ. ವಾದಿಗಳ ಮಾತು ಕೇಳಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

(ಓ.ಹೇ.ಕೇ.ಸ.ಇದೆ)

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ

ಸಾಕ್ಷಿದಾರರ ಸಹಿ